ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 003**

**ಸಂಖ್ಯೆ:** ಕ.ಶಾ.ಪ&ಮೌ.ಮಂ/ಪಪೂಗಶಾಖೆ.19/ತಾಪ/ಪಪ-1/2025-26. **ದಿನಾಂಕ:**19-01-2026

## ಸುತ್ತೋಲೆ

**ವಿಷಯ**: 2026ರ ದ್ವಿತೀಯ ಪಿ.ಯು.ಸಿ ಪರೀಕ್ಷೆ-1ಕ್ಕೆ ಹಾಜರಾಗುವ ವಿದ್ಯಾರ್ಥಿಗಳ ಕರಡು ಪ್ರವೇಶ ಪತ್ರಗಳನ್ನು ಪ್ರಾಂಶುಪಾಲರ ಲಾಗಿನ್ ನಲ್ಲಿ ಲಭ್ಯಗೊಳಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026ರ ದ್ವಿತೀಯ ಪಿ.ಯು.ಸಿ ತಾತ್ವಿಕ ಪರೀಕ್ಷೆ-1ಕ್ಕೆ ಹಾಜರಾಗುವ ವಿದ್ಯಾರ್ಥಿಗಳ ಕರಡು ಪ್ರವೇಶ ಪತ್ರಗಳನ್ನು ಮಂಡಲಿಯ ವೆಬ್‌ಸೈಟ್‌ನ ಕಾಲೇಜಿನ ಪ್ರಾಂಶುಪಾಲರ ಲಾಗಿನ್ (PU College Login) ನಲ್ಲಿ ಲಭ್ಯಗೊಳಿಸಲಾಗಿರುತ್ತದೆ. ಪ್ರಾಂಶುಪಾಲರು ಕರಡು ಪ್ರವೇಶ ಪತ್ರಗಳನ್ನು ಡೌನ್ಲೋಡ್ ಮಾಡಿಕೊಂಡು, ಕರಡು ಪ್ರವೇಶ ಪತ್ರಗಳಲ್ಲಿ ನೀಡಲಾಗಿರುವ ವಿದ್ಯಾರ್ಥಿಯ ಮಾಹಿತಿಯನ್ನು ಖುದ್ದಾಗಿ ಪರಿಶೀಲಿಸುವುದು ಹಾಗೂ ಪ್ರತಿ ವಿದ್ಯಾರ್ಥಿಗಳಿಂದ ಅವರ ಕರಡು ಪ್ರವೇಶ ಪತ್ರಗಳನ್ನು ಪರಿಶೀಲಿಸಿ, ಅವರ ಸಹಿ ಪಡೆಯಲು ಈ ಮೂಲಕ ಸೂಚಿಸಿದೆ.

1. **ಕರಡು ಪ್ರವೇಶ ಪತ್ರಗಳಲ್ಲಿ ನೀಡಲಾಗಿರುವ ಹೊಸ (Regular) ವಿದ್ಯಾರ್ಥಿಗಳ ಮಾಹಿತಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ, ಕಾಲೇಜಿನ ಪ್ರಾಂಶುಪಾಲರು ಪಾಲಿಸಬೇಕಾದ ಕ್ರಮಗಳನ್ನು ಈ ಕೆಳಗಿನಂತೆ ವಿವರಿಸಿದೆ.**

   ಕರಡು ಪ್ರವೇಶ ಪತ್ರದ ಪಟ್ಟಿಯಲ್ಲಿ ಹೊಸ ವಿದ್ಯಾರ್ಥಿಯ ಮಾಹಿತಿ, ಮಾಧ್ಯಮ, ವಿಷಯ, ಸಂಯೋಜನೆ ಹಾಗೂ ವಿದ್ಯಾರ್ಥಿಯ ಭಾವಚಿತ್ರದಲ್ಲಿ ಯಾವುದೇ ತಿದ್ದುಪಡಿಗಳಿದ್ದಲ್ಲಿ **ದಿನಾಂಕ 31-01-2026 ರೊಳಗೆ** SATSನಲ್ಲಿ ತಿದ್ದುಪಡಿ ಮಾಡಿಸಿಕೊಂಡು ನಂತರ ಪ್ರಾಂಶುಪಾಲರ ಲಾಗಿನ್ (PU College Login) ನಲ್ಲಿ "Regular Candidate Registration" ಅನ್ನು click ಮಾಡಿದಾಗ ಬರುವ "Updation/Deletion" ಅನ್ನು click ಮಾಡಬೇಕು. ನಂತರ ವಿದ್ಯಾರ್ಥಿಯ SATS Number ಅನ್ನು ನಮೂದಿಸಿ click ಮಾಡಿದಾಗ ವಿದ್ಯಾರ್ಥಿಯ ಮಾಹಿತಿ ತೆರೆದುಕೊಳ್ಳುತ್ತದೆ. ಅಲ್ಲಿ ನೀಡಿರುವ 'IMPORT LASTEST SATS DATA' click ಮಾಡಿ Update ತಿದ್ದುಪಡಿ ಮಾಡಿಕೊಳ್ಳುವುದು.

2. **ಖಾಸಗಿ ಅಭ್ಯರ್ಥಿಗಳ ಕರಡು ಪ್ರವೇಶ ಪತ್ರಗಳನ್ನು ಮಂಡಲಿಯ ವೆಬ್‌ಸೈಟ್‌ನ ಕಾಲೇಜಿನ ಪ್ರಾಂಶುಪಾಲರ ಲಾಗಿನ್ (PU College Login) ನಲ್ಲಿ ಮತ್ತು ಖಾಸಗಿ ಅಭ್ಯರ್ಥಿಗಳ ಲಾಗಿನ್‌ನಲ್ಲಿ ಲಭ್ಯಗೊಳಿಸಲಾಗಿರುತ್ತದೆ.** ಖಾಸಗಿ ಅಭ್ಯರ್ಥಿಗಳ ಮಾಹಿತಿಯಲ್ಲಿ ತಿದ್ದುಪಡಿಗಳಿದ್ದಲ್ಲಿ, ಆಯಾ ಅಭ್ಯರ್ಥಿಗಳು ತಾವು ದಾಖಲಾತಿಗೆ ಬಳಸಿದ ಮಂಡಲಿಯ ವೆಬ್‌ಸೈಟ್‌ನಲ್ಲಿ ಮೊಬೈಲ್ ನಂಬರ್ ಮತ್ತು Password ಉಪಯೋಗಿಸಿಕೊಂಡು ಲಾಗಿನ್ ಅಗಿ ತಿದ್ದುಪಡಿ ಮಾಡಿಕೊಳ್ಳಬಹುದು. ಮಾಹಿತಿಯನ್ನು ತಿದ್ದುಪಡಿ ಮಾಡಿದ ನಂತರ ಸೂಕ್ತ ದಾಖಲೆಗಳೊಂದಿಗೆ ತಿದ್ದುಪಡಿಯಾದ ಖಾಸಗಿ ಅಭ್ಯರ್ಥಿಯ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಅವರು ದಾಖಲಾಗಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ದಿನಾಂಕ: 31-01-2026 ರೊಳಗೆ ನೇರವಾಗಿ ಸಲ್ಲಿಸುವುದು.

3. **ಪುನರಾವರ್ತಿತ ಅಭ್ಯರ್ಥಿಯ ಭಾವಚಿತ್ರದಲ್ಲಿ ಯಾವುದೇ ವ್ಯತ್ಯಾಸಗಳಿದ್ದಲ್ಲಿ** ಆಯಾ ಅಭ್ಯರ್ಥಿಗಳು ತಾವು ದಾಖಲಾತಿಗೆ ಬಳಸಿದ ಮಂಡಲಿಯ ವೆಬ್‌ಸೈಟ್‌ನಲ್ಲಿ ಮೊಬೈಲ್ ನಂಬರ್ ಮತ್ತು Password ಉಪಯೋಗಿಸಿಕೊಂಡು ಲಾಗಿನ್ ಅಗಿ ವಿದ್ಯಾರ್ಥಿಯ ಭಾವಚಿತ್ರವನ್ನು ಮತ್ತೊಮ್ಮೆ ಅಪ್ಲೋಡ್ ಮಾಡಲು UPDATE OPTION ಮೂಲಕ ಪುನರಾವರ್ತಿತ ಅಭ್ಯರ್ಥಿಯ ಲಾಗಿನ್ ನಲ್ಲಿ ಅವಕಾಶ ನೀಡಲಾಗಿದೆ.
4. ವಿವಿಧ ಕಾರಣಗಳಿಂದ (SHORTAGE OF ATTENDANCE, FEES NOT PAID, NOT ADMITTED, TC ISSUED, DISCONTINUED, DEATH ಇತ್ಯಾದಿ) **ಕರಡು ಪ್ರವೇಶ ಪತ್ರ ಬಂದಿರುವ ಹೊಸ (Regular) ವಿದ್ಯಾರ್ಥಿಗಳ ಅಂತಿಮ ಪ್ರವೇಶ ಪತ್ರವನ್ನು ತಡೆಹಿಡಿಯಲು** ಪ್ರಾಂಶುಪಾಲರ ಲಾಗಿನ್ (PU College Login) ನಲ್ಲಿ "Regular Candidate Registration" ಅನ್ನು click ಮಾಡಿದಾಗ ಬರುವ "Updation/Deletion" ಅನ್ನು click ಮಾಡಬೇಕು. ನಂತರ ವಿದ್ಯಾರ್ಥಿಯ SATS Number ಅನ್ನು ನಮೂದಿಸಿ click ಮಾಡಿದಾಗ ಸೂಕ್ತ ಕಾರಣವನ್ನು (SHORTAGE OF ATTENDANCE, FEES NOT PAID, NOT ADMITTED, TC ISSUED, DISCONTINUED, DEATH ಇತ್ಯಾದಿ) ಅಯ್ಕೆ ಮಾಡಿಕೊಂಡು, **'REMOVE'** BUTTON ಅನ್ನು click ಮಾಡಿ ದಿನಾಂಕ: 31-01-2026ರೊಳಗೆ ಪ್ರಾಂಶುಪಾಲರು ಡಿಲೀಟ್ ಮಾಡುವುದು.
5. **ಯಾವುದೇ ಹೊಸ (Regular) ವಿದ್ಯಾರ್ಥಿಯ ಮಾಹಿತಿಯನ್ನು ಒಮ್ಮೆ DELETE ಮಾಡಿದ ನಂತರ ಅವರಿಗೆ ಅಂತಿಮ ಪ್ರವೇಶ ಪತ್ರ ಪಡೆಯುವ ಅವಕಾಶವಿರುವುದಿಲ್ಲ.** ಆದ್ದರಿಂದ DELETE ಮಾಡುವ ಮುನ್ನ ಪ್ರಾಂಶುಪಾಲರು ವಿದ್ಯಾರ್ಥಿಯ ಮಾಹಿತಿಯನ್ನು ಪರಿಶೀಲಿಸುವುದು. ಇಂತಹ ವಿದ್ಯಾರ್ಥಿಗಳು 2026ರ ಹಾಗೂ ನಂತರದ ಪರೀಕ್ಷೆಗಳಿಗೆ ಪುನರಾವರ್ತಿತ ಅಭ್ಯರ್ಥಿಯಾಗಿ ಪರೀಕ್ಷೆ ಬರೆಯಲು ಅವಕಾಶ ಇರುವುದಿಲ್ಲ.

(**ಸೂಚನೆ**: ಸದರಿ ಪ್ರಕ್ರಿಯೆ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಂಡಲಿಯ ಜಾಲತಾಣದಲ್ಲಿ ನೀಡಿರುವ ಸಂಬಂಧಿಸಿದ ಜಿಲ್ಲಾ ಶಾಖಾಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಿದೆ.)

**ಅಧ್ಯಕ್ಷರು,**
**ಕರ್ನಾಟಕ ಶಾಲಾ ಪರೀಕ್ಷೆ ಮತ್ತು**
**ಮೌಲ್ಯ ನಿರ್ಣಯ ಮಂಡಲಿ.**

**ಸೂಕ್ತ ಕ್ರಮಕ್ಕಾಗಿ: -**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ **(ಮುಂದಿನ ಕ್ರಮಕ್ಕಾಗಿ)**
2. ರಾಜ್ಯದ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ. **(ಮುಂದಿನ ಕ್ರಮಕ್ಕಾಗಿ)**
3. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಇವರಿಗೆ **(ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ).**

**ಪ್ರತಿಯನ್ನು: -**

1. ನಿರ್ದೇಶಕರು, (ಪರೀಕ್ಷೆಗಳು) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಂಟಿ ನಿರ್ದೇಶಕರು (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಉಪನಿರ್ದೇಶಕರು, (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಹೆಚ್ಚುವರಿ/ಕಛೇರಿ ಪ್ರತಿ.